ಹಂತವನ್ನು ಅಭ್ಯಸಿಸಿ ಶಿಫಾರಸ್ಸು ಮಾಡಲು ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯದ ಹಿರಿಯ ಅಧಿಕಾರಿಗಳ ಜಂಟಿ ಸಮಿತಿಯನ್ನು ನೇಮಿಸಲಾಗಿದೆ.

ಇ) ಮಹಾಜನ ವರದಿಯನ್ನು ಅನುಷ್ಠಾನಕ್ಕೆ ತರುವುದರ ಮೂಲಕ ಭಾರತ ಸರ್ಕಾರವು ಕರ್ನಾಟಕಕ್ಕೆ ನ್ಯಾಯವನ್ನು ದೊರಕಿಸಿಕೊಡುವುದೆಂಬ ಭರವಸೆಯನ್ನು ಕರ್ನಾಟಕ ಸರ್ಕಾರವು ಹೊಂದಿದೆ.

ಮಹಾಜನ ವರದಿಯ ಅನುಷ್ಠಾನ

೧೩೧೭. ಶ್ರೀ ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರವು ಮಹಾಜನ ವರದಿಯನ್ನು ಅನುಷ್ಠಾನಕ್ಕೆ ತರಲು ಕೈಗೊಂಡ ಕ್ರಮಗಳೇನು?

ಆ) ಈ ವರದಿಯ ಜಾರಿಗಾಗಿ ಪ್ರಧಾನ ಮಂತ್ರಿಯವರ ಬಳಿಗೆ ವಿಧಾನ ಮಂಡಲದ ಸದಸ್ಯರುಗಳ ಸಮಿತಿಯನ್ನು ಕಳುಹಿಸಿಕೊಡುವ ಯೋಜನೆ ಸರ್ಕಾರಕ್ಕಿದೆಯೇ?

ಇ) ಹಾಗಿದ್ದಲ್ಲಿ ಯಾವಾಗ ಕಳುಹಿಸಲಾಗುವುದು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ಕರ್ನಾಟಕ ಸರ್ಕಾರವು ಮಹಾಜನ ವರದಿಯನ್ನು ಅನುಷ್ಠಾನಕ್ಕೆ ತರುವಂತೆ ದೃಢವಾಗಿ ಭಾರತ ಸರ್ಕಾರವನ್ನು ಒತ್ತಾಯಿಸುತ್ತಿದೆ. ಈ ವಿಷಯದಲ್ಲಿ ದಿನಾಂಕ. ೨೦-೮-೧೯೮೫, ೧೧-೯-೧೯೮೫ ಮತ್ತು ೯-೧೦-೧೯೮೫ರಂದು ಮೂರು ಪತ್ರಗಳನ್ನು ಪ್ರಧಾನ ಮಂತ್ರಿಯವರಿಗೆ ಬರೆಯಲಾಗಿದ್ದು ಮಹಾಜನ ವರದಿ ಅಂತಿಮವೆಂದೂ ಮತ್ತು ಇದನ್ನು ಅನುಷ್ಠಾನಕ್ಕೆ ತರದಿದ್ದರೆ ಕರ್ನಾಟಕಕ್ಕೆ ಘೋರ ಅನ್ಯಾಯವಾಗುವುದೆಂದೂ ಮನವರಿಕೆ ಮಾಡಿಕೊಡಲಾಗಿದೆ.

ಆ) ಮಹಾಜನ ವರದಿಯನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಬೇಕೆಂದು ಭಾರತ ಸರ್ಕಾರವನ್ನು ಒತ್ತಾಯಿಸುವ ಒಮ್ಮತದ ನಿರ್ಣಯವನ್ನು ಕರ್ನಾಟಕ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳು ೨೭-೩-೧೯೮೫ರಂದು ಅಂಗೀಕರಿಸಿವೆ.

ಇ) ಹೌದು ಸರ್ವಪಕ್ಷೀಯ ಶಾಸಕರ ನಿಯೋಗವೊಂದನ್ನು ಪ್ರಧಾನ ಮಂತ್ರಿಗಳ ಬಳಿ ಆದಷ್ಟು ಬೇಗ ಕೊಂಡೊಯ್ಯಲು ಕ್ರಮ ಕೈಗೊಳ್ಳಲಾಗಿದೆ.

ಅಖಿಲ ಭಾರತ ಸೇವಾ ಅಧಿಕಾರಿಗಳು ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ಬಗ್ಗೆ

೧೪೯೦(ಬಿ) ಶ್ರೀ ಎಸ್. ಎಸ್. ಪೇಡ್ (ಇಂಡಿ).—ಮಾನ್ಯ ಮುಖ್ಯಮಂತ್ರಿಯವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಎ) ರಾಜ್ಯದಲ್ಲಿ ೧-೧-೧೯೮೫ರಲ್ಲಿದ್ದಂತೆ ಸೇವೆ ಸಲ್ಲಿಸುತ್ತಿರುವ ಅಖಿಲ ಭಾರತ ಸೇವಾ ಅಧಿಕಾರಿಗಳ ಒಟ್ಟು ಸಂಖ್ಯೆ.

ಬಿ) ಇವರ ಪೈಕಿ ಎಷ್ಟು ಜನ ಅಧಿಕಾರಿಗಳು ಸೇವೆಗೆ ಸೇರಿದ ನಂತರ ಬೆಂಗಳೂರು ಪಟ್ಟಣ ಹಾಗು ಗ್ರಾಮಾಂತರ ಜಿಲ್ಲೆಯಲ್ಲಿ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ.

ಸಿ) ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ಯಾರಾದರೂ ಅಧಿಕಾರಿಗಳು ಭೂ ಸಂಧಾರಣಾ ಕಾಯ್ದೆಯನ್ನು ಉಲ್ಲಂಘಿಸಿದ್ದಾರೆಯೇ. (ಹೆಸರುಗಳನ್ನು ನಮೂದಿಸಿ).

ಡಿ) ಹಾಗಾದಲ್ಲಿ, ಇಂಥವರ ವಿಷಯದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?